ಹೀರೆಹಳ್ಳ ಯೋಜನೆಗೆ ಖರ್ಚಾದ ಹಣ

1175 (1189): ಶ್ರೀ ಎಂ. ಬಿ. ದಿವಟರ್ (ಕೊಪ್ಪಳ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ಯೋಜನೆಗೆ ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು;

ಆ) ಇದನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ರೂ. 14.24 ಕೋಟಿ (ಫೆಬ್ರವರಿ 1993ರವರೆಗೆ).

ಆ) ತೀವ್ರಗತಿಯಲ್ಲಿ ಪೂರೈಸಲು ಎಲ್ಲಾ ಕ್ರಮ ತೆಗೆದುಕೊಳ್ಳಲಾಗುವುದು.

ಹಾರಂಗಿ ನಾಲೆಯ ರಿಪೇರಿ ಕಾರ್ಯ ನಡೆಯದೆ ಗ್ರಾಮಗಳ ರೈತರಿಗೆ ತೊಂದರೆ

1176 (571): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಮವಾರಪೇಟೆ ತಾಲ್ಲೂಕಿನ ಹಾರಂಗಿ ನಾಲೆಯ ದುರಸ್ತಿ ಕಾರ್ಯ ನಡೆಯದೆ ಅಲ್ಲಿನ ಹೆಬ್ಬಾಳೆ, ಕಣಿವೆ, ಶಿರಂಗಾಲ, ತೊರೆನೂರು ಗ್ರಾಮಗಳ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ದುರಸ್ಥಿ ಮಾಡಲಾಗುವುದು;

ಇ) ಒಟ್ಟು ಇನ್ನೂ ಎಷ್ಟು ಗ್ರಾಮಗಳಿಗೆ ತೊಂದರೆಯಾಗಿದೆ ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹಾರಂಗಿ ಎಡದಂಡೆ ನಾಲೆಯ ಕೆಲವು ಭಾಗಗಳಲ್ಲಿ ಹೂಳು ತುಂಬಿದ್ದು ಅಥವಾ ನಾಲೆಯ ಹೊದಿಕೆ ಬಿದ್ದು ಹೋಗಿದ್ದರೂ ಸಹ ನಾಲೆಯ ಪ್ರಾರಂಭದಲ್ಲಿ ಬರುವ ಈ ಗ್ರಾಮಗಳ ಅಚ್ಚುಕಟ್ಟು ಪ್ರದೇಶಗಳಿಗೆ 1993ರ ಮುಂಗಾರು ಬೆಳೆಗಳಿಗೆ ಅವಶ್ಯವಾದ ನೀರನ್ನು ಒದಗಿಸಲಾಗಿದೆ.

ಆ) ಹಣದ ಲಭ್ಯತೆಯನ್ನು ಅವಲಂಬಿಸಿ, ದುರಸ್ತಿ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ಇ) ಇತರ ಯಾವುದೇ ಗ್ರಾಮಗಳಿಗೆ ತೊಂದರೆ ಆಗಿರುವುದರ ಬಗ್ಗೆ ವರದಿಯಾಗಿರುವುದಿಲ್ಲ.

ಅಡಿನಾಡೋರ ಏತ ನೀರಾವರಿ ಯೋಜನೆಯ ಸರ್ವೆ

1177 (2062): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಮವಾರ ಪೇಟೆ ತಾಲ್ಲೂಕಿನ ಅಡಿನಾಡೋರ ಏತ ನೀರಾವರಿ ಯೋಜನೆಯ ಬಗ್ಗೆ ಸರ್ವೆ ಕಾರ್ಯವು ಮುಗಿದಿದೆಯೇ;